# ಅಂದಿಗಲ್ಲದೆ ಮನದ ಪರಿತಾಪವಡಗದೊ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 14.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 419.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.

ರಾಗ: ಮುಖಾರಿ                    ತಾಳ: ಅಟ

ಅಂದಿಗಲ್ಲದೆ ಮನದ ಪರಿತಾಪವಡಗದೊ ಮು-
ಕುಂದ ಮಾಧವ ಮುರಾರೆ ಶೌರೇ    || ಪ ||

ಎಂದಿಗೆ ನಿನ್ನ ಭಕ್ತರ ಸಂಗ ಸೌಖ್ಯಗಳೊ
ಎಂದಿಗಭಯವ ಪಡೆವೆನೊ ಕೃಷ್ಣ    || ಅಪ ||

ಎಂದಿಗೀ ಜನನ ಮರಣಾದಿಗಳು ಪರಿಹರವು
ಎಂದಿಗೆ ಏಕಾಂತ ಭಕ್ತಿಯೋ ಕೃಷ್ಣ
ಎಂದಿಗೀ ಮಾನಾವಮಾನ ಸುಖ ದುಃಖ
ನಿಂದೆ ವಂದನೆಗಳಲಿ ಸಮತೆಯೊ ಕೃಷ್ಣ
ಎಂದಿಗೆ ಈ ಹೀನ ಜನ ಸಂಗ ಪರಿಹರವೊ
ಎಂದಿಗೆ ಸುಜ್ಞಾನ ಪಡೆವೆನೋ ಕೃಷ್ಣ
ಎಂದಿಗೆನ್ನದು ತನ್ನದೆಂಬ ದುರ್ಮೋಹ
ವೃಂದಗಳ ಕಡೆಗಣಿಪೆನೋ ಕೃಷ್ಣ    || 1 ||

ಎಂದಿಗೆ ಈ ಕರ್ಮ ಕಾನನವ ತರಿವುದೊ

ಎಂದಿಗಪರೋಕ್ಷ ಸುಖವೋ ಕೃಷ್ಣ
ಎಂದಿಗೆ ಶಮದಮಗಳನ್ನು ನಾ ಪಡೆವುದೋ
ಎಂದಿಗಾಸೆ ನಿರಾಸೆಯೋ ಕೃಷ್ಣ
ಎಂದಿಗೀ ಕಾಮ ಸಂಕಲ್ಪಾದಿ ದೋಷಗಳ
ದ್ವಂದ್ವಗಳ ಕಡೆಗಣಿಪೆನೋ ಕೃಷ್ಣ
ಎಂದಿಗೀ ಕಾಯ ಕರುಣಾದಿಗಳು ನಾನಲ್ಲ-
ವೆಂದೆಂಬ ನಿಜದ ನೆಲೆಯೊ ಕೃಷ್ಣ || 2 ||

ದುರಿತ ಕೋಟಿಗಳನಳವಡಿಸಿಪ್ಪ ಸಂಸಾರ
ಸೆರೆಮನೆಯ ಕಳೆವುದೆಂದೋ ಕೃಷ್ಣ
ಕರಣಗಳ ಕಾದಾಟವನು ಬಿಡಿಸುವಭ್ಯಾಸ
ವನು ನಾನು ಪಡೆವುದೆಂದೋ ಕೃಷ್ಣ
ತರತರದ ತಾಪತ್ರಯಗಳನ್ನು ನೀಗಿಸಿ
ಸ್ಥಿರ ಚಿತ್ತ ಪಡೆವುದೆಂದೋ ಕೃಷ್ಣ
ಸಿರಿ ಪುರಂದರ ವಿಠಲರಾಯ ನಿನ್ನಯ ದಿವ್ಯ
ಚರಣದೊಲುಮೆಯು ಎಂದಿಗೋ ಕೃಷ್ಣ || 3 ||

**Classification:** Keerthane
**Ankita:** siri purandara vittala
**Location:** NA
**Category:** Bhakti
**Sub-Category:** mana, dina, Madhava, Krishna, mukunda, bhakti, bhaya, huttu, marana, apamana, sukha, dukha, jana, jnana, moha, karma, kaadu, karuna, papa, samsara, mane, chitta, divya, olume,
**Pravachana:** NA
**Explanation:** NA